# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 99(08) |
| ಮಾನ್ಯ ಸದಸ್ಯರ ಹೆಸರು: | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 15.07.2024. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಶಿಕ್ಷಣ ಇಲಾಖೆಯ ಶಾಲಾ ಶಿಕ್ಷಕರುಗಳು ಅಪ್ ಡೇಟ್ ಇಲ್ಲದೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಹೊಸ ವಿಷಯಗಳನ್ನು ತಿಳಿಸಲಾಗಿದೆ: ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರ ಭಾಗದ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗಿಂತ ಹಿಂದುಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು: | 1. ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರುಗಳಿಗೆ ವರ್ಷದಲ್ಲಿ ಬೋಧನಾ ಕೌಶಲ್ಯ ಅಭಿವೃದ್ಧಿಪಡಿಸಲು ಕನಿಷ್ಠ 5 ದಿನಗಳ ವಿಷಯಾಧಾರಿತ ತರಬೇತಿಗಳನ್ನು ನೀಡಲಾಗುತ್ತಿದೆ.<br><br>2. ವಿಷಯ ಬೋಧನೆಯಲ್ಲಿ ಕ್ಲಿಷ್ಟಾಂಶ ಕುರಿತು ಪರಿಹಾರಗಳು, ಕಲಿಕಾ ಫಲ ಆಧಾರಿತ ತರಗತಿ ಪ್ರಕ್ರಿಯೆ ಮತ್ತು ಮೌಲ್ಯಂಕನ ಮಾಹಿತಿ ಹಾಗೂ ಪರಸ್ಪರ ಬೋಧನಾ ಕಲಿಕಾ ವಿಚಾರ ವಿನಿಮಯ ನಡೆಸಿ, ಶೈಕ್ಷಣಿಕ ಮಾರ್ಗದರ್ಶನ ನೀಡಲು ವರ್ಷದಲ್ಲಿ 6 ಬಾರಿ ಕ್ಲಸ್ಟರ್/ಹೋಬಳಿ ಮಟ್ಟದಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸಲಾಗುತ್ತದೆ.<br><br>3. 2019-20ನೇ ಸಾಲಿನಿಂದ ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮ ಪಡಿಸುವ ಸದುದ್ದೇಶದಿಂದ ಆಂಗ್ಲ ದ್ವಿಭಾಷಾ ಮಾಧ್ಯಮ (Bilingual) ತರಗತಿಗಳನ್ನು ಪ್ರಾರಂಭಿಸಿದೆ. ಪ್ರತಿ ವರ್ಷ ಸದರಿ ಶಾಲೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರುಗಳಿಗೆ EMTIP (English Medium Teachers Induction Programme) 8 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ.<br><br>4. 2024-25ನೇ ಸಾಲಿನಲ್ಲಿ ರಾಜ್ಯ ಸರ್ಕಾರವು 6ನೇ ತರಗತಿಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲಾಗಿದೆ. 6ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 2002 ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br><br>5. 2024-25ನೇ ಸಾಲಿಗೆ ಕೇಂದ್ರ ಯೋಜನಾ ಮಂಡಳಿ ವತಿಯಿಂದ ಶಿಕ್ಷಕರುಗಳ ಜ್ಞಾನ ಮತ್ತು ಬೋಧನಾ ಸಾಮರ್ಥ್ಯ ವೃದ್ಧಿಗಾಗಿ ಈ ಕೆಳಕಂಡಂತೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುಮೋದನೆ ದೊರೆತಿರುತ್ತದೆ. ಅದರಂತೆ ತರಬೇತಿ ನೀಡಲಾಗುತ್ತದೆ. |

| ತರಬೇತಿ ವಿಧ | ಭೌತಿಕ |
|---|---|
| 6 ರಿಂದ 8ನೇ ತರಗತಿ ಸರ್ಕಾರಿ ಶಾಲಾ ಶಿಕ್ಷಕರಿಗೆ ಸಾಮಾರ್ಥ್ಯಾಭಿವೃದ್ಧಿ ತರಬೇತಿ | 51917 |
| 9 ರಿಂದ 10ನೇ ತರಗತಿ ಸರ್ಕಾರಿ ಶಾಲಾ ಶಿಕ್ಷಕರಿಗೆ ಸಾಮಾರ್ಥ್ಯಾಭಿವೃದ್ಧಿ ತರಬೇತಿ | 44687 |
| 9 ರಿಂದ 10ನೇ ತರಗತಿ ಅನುದಾನಿತ ಶಾಲಾ ಶಿಕ್ಷಕರಿಗೆ ಸಾಮಾರ್ಥ್ಯಾಭಿವೃದ್ಧಿ ತರಬೇತಿ | 24207 |

<table>
<tr>
<td>ಆ)</td>
<td>ಶಿಕ್ಷಣ ಇಲಾಖೆಯ ಶಾಲಾ ಶಿಕ್ಷಕರುಗಳಿಗೆ ಅಪ್‌ಡೇಟ್ ಆಗಲು ಕಾಲ ಕಾಲಕ್ಕೆ ಯಾವುದಾದರೂ ಹೊಸ ವಿಷಯಗಳ ಕುರಿತು ಪರೀಕ್ಷೆಯನ್ನು ಗೊತ್ತುಪಡಿಸಿ ಪಾಸು ಮಾಡುವಂತೆ ಸೂಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: ಆ ಮೂಲಕ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುವಂತೆ ಮಾಡಲು ಇಲಾಖೆಯು ಹಾಕಿಕೊಂಡ ಕ್ರಮಗಳೇನು:</td>
<td>
<table>
<tr><td>ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕರ್ಮಯೋಗಿ ಶಿಕ್ಷಕ್ ತರಬೇತಿ</td><td>136333</td></tr>
<tr><td>ಪ್ರೌಢ ಶಾಲಾ ಶಿಕ್ಷಕರಿಗೆ ಕರ್ಮಯೋಗಿ ಶಿಕ್ಷಕ್ ತರಬೇತಿ</td><td>50779</td></tr>
</table>
</td>
</tr>
<tr>
<td>ಇ)</td>
<td>ಶಿಕ್ಷಕರುಗಳ ಜ್ಞಾನವನ್ನು ಹೆಚ್ಚಿಸಲು ಜಿಲ್ಲಾ ಮಟ್ಟಗಳಲ್ಲಿ ಹೊಸ-ಹೊಸ ವಿಷಯಗಳ/ಸಾಮಾನ್ಯ ಜ್ಞಾನದ ಕುರಿತು ಕಾರ್ಯಗಾರಗಳನ್ನು ನಡೆಸಿ ಪರೀಕ್ಷೆಗಳನ್ನು ನಡೆಸಲು ಇಲಾಖೆಯು ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ಒದಗಿಸುವುದು)</td>
<td>1. ಜಿಲ್ಲಾ ಮಟ್ಟದಲ್ಲಿ ಒಂದೊಂದು ಬೋಧನಾ ವಿಷಯಗಳ ಮಾಸಾಚಾರಣೆ ನಡೆಸಲಾಗುತ್ತದೆ. (ಭಾಷಾ ಮಾಸಾಚಾರಣೆ, ವಿಜ್ಞಾನ ಮಾಸಾಚಾರಣೆ ಇತ್ಯಾದಿ).<br>2. ಡಯಟ್‌ಗಳ ಮೂಲಕ ಭೇಟಿ ಸಂದರ್ಭದಲ್ಲಿ ಕಲಿಕಾ ಕಠಿಣಾಂಶಗಳ ಕುರಿತು ಅಧ್ಯಯನ ನಡೆಸಿ ವಿಷಯ ಬೋಧನೆಗೆ ಪರಿಹಾರ ಕ್ರಮ ಕೈಗೊಳ್ಳಲಾಗುತ್ತದೆ.<br>3. ಪ್ರಚಲಿತ ಹೊಸ ವಿಷಯ ಕುರಿತು ಸಂವಾದ ಕಾರ್ಯಕ್ರಮ ನಡೆಸಲಾಗುತ್ತದೆ.<br>4. ಜಿಲ್ಲಾ ಹಂತದಲ್ಲಿ ಬೋಧನಾ ಕಲಿಕಾ ಸಮಸ್ಯೆಗಳಿಗೆ ಪರಿಹಾರಗಳನ್ನು ಸಿದ್ಧಪಡಿಸಿ ಜಿಲ್ಲಾ ಹಂತದಲ್ಲಿ ರಚಿಸಿಕೊಳ್ಳಲಾಗಿರುವ you tube ಗಳಲ್ಲಿ ಅಳವಡಿಸಿ ಮಾಹಿತಿ ಒದಗಿಸಲಾಗುತ್ತದೆ.</td>
</tr>
</table>

**ಇಪಿ 34 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು